## ಭಾಷೆಗೆ ಬೆಲೆ ಬಂದಿದ್ದು

ಹಿಂದೆ ಎಲ್ಲಾ ಸಿನಿಮಾ, ಟಿವಿ ಧಾರಾವಾಹಿಗಳಲ್ಲಿ ಉತ್ತರ ಕರ್ನಾಟಕದ ಭಾಷಾ ಶೈಲಿಯನ್ನು ಹಾಸ್ಯಕ್ಕೆ ಬಳಸಿ ಅಪಹಾಸ್ಯ ಮಾಡಲಾಗುತ್ತಿತ್ತು. ಆದರೆ ಇಂದು ಅದೇ ಉತ್ತರ ಕರ್ನಾಟಕದ ಭಾಷಾ ಶೈಲಿಯ ಬಳಕೆಯಿಂದ ಧಾರಾವಾಹಿಗಳು ಉತ್ತಮ ಟಿ.ಆರ್.ಪಿ. ಪಡೆದು ಜನರ ಮೆಚ್ಚುಗೆ ಪಡೆಯುತ್ತಿವೆ. ಭಾಷೆಗೆ ಇದರಿಂದ ಬೆಲೆ ಬಂದಿದೆ. ಹೊಸತನ ಬಯಸುವ ವೀಕ್ಷಕರಿಗೆ ಇದರಿಂದ ತುಂಬ ಖುಷಿಯಾಗಿದೆ. 'ಮನಸ್ಸಿಗೆ ಬಾಳ ಹಿಡಿಸೈತ್ರಿ. ಹಿಂಗ ಬರ್ಲಿ ರೀ' ಎನ್ನುವುದೇ ನಮ್ಮೆಲ್ಲರ ಹಾರೈಕೆ. ಮೂಡಲ ಮನೆ ಧಾರಾವಾಹಿ ನಂತರ ಯಾವುದೇ ಉತ್ತರ ಕರ್ನಾಟಕದ ಶೈಲಿ ಧಾರಾವಾಹಿ ಬಂದಿರಲಿಲ್ಲ. ಒಂದು ದಶಕದ ನಂತರ ಮತ್ತೆ ಇಂತಹವೇ ಶುರುವಾಗಿರುವುದು ಉತ್ತಮ ಬೆಳವಣಿಗೆ.

—ಕೆ.ಜಿ. ಮಂಜುಳಾ ವಿಠಲರಾವ್, ಚಿತ್ರದುರ್ಗ

## ಚಂದನದ ಸುಗಂಧ

'ಥಟ್ ಅಂಥ ಹೇಳಿ' ಕನ್ನಡದ ಕ್ವಿಜ್‌ಗೆ 3000 ಗರಿಯ ಮುಕುಟ. 2002 ರಲ್ಲಿ ಶುರುವಾದ ಈ ಕಾರ್ಯಕ್ರಮವು ಚಂದನ ವಾಹಿನಿಯ ಮೈಲಿಗಲ್ಲು. ಸ್ಪರ್ಧಿಗಳ ಆಯ್ಕೆ, ವಿಷಯಗಳ ಆಯ್ಕೆಗಳಿಗೆ ಸ್ಪರ್ಧಿಗಳ ಅವಕಾಶ ಎಲ್ಲವೂ ನವೀನ ರೀತಿ. ಸಾವಿರಾರು ಸಂಖ್ಯೆಯ ವೀಕ್ಷಕರ ಸಮಕ್ಷಮದಲ್ಲಿ ನಡೆಯುವಂತೆ ಆಯೋಜಿಸಿರುವುದು ಶ್ಲಾಘನೀಯ. ಹಾಸನ ಜಿಲ್ಲೆಯನ್ನು ವಿಶೇಷವಾಗಿ ಪರಿಚಯಿಸಿ ಅಲ್ಲಿಯೂ 'ಥಟ್...' ನಡೆಸಿಕೊಟ್ಟಿದ್ದಾರೆ. ಇದನ್ನು ಸತತವಾಗಿ ನಡೆಸಿಕೊಂಡು ಬಂದಿರುವ ಡಾ. ನಾ. ಸೋಮೇಶ್ವರ ಅವರಿಗೆ ಅಭಿನಂದನೆ.

—ಕೆ.ಎಸ್. ಪ್ರಭಾಕರಗುಪ್ತ, ಹಾಸನ

## ಪ್ರಪಂಚದ ಎಂಟನೇ ಅದ್ಭುತ?

ಸುವರ್ಣ ವಾಹಿನಿಯ 'ಗುಂಡ್ಯಾನ ಹೆಂಡ್ತಿ' ಇದ್ದಕ್ಕಿದ್ದಂತೆ ತನ್ನ ಬಿಗುವನ್ನು ಕಳೆದುಕೊಂಡಿದೆ ಎಂದರೆ ತಪ್ಪಾಗಲಾರದು. ಗುಂಡ್ಯಾ ತೀರಿ ಹೋದ ಎಂಬ ಸುದ್ದಿ ತಿಳಿದ ಕಮಲಿ ಕಾರಣಾಂತರದಿಂದ ಬೆಂಗಳೂರನ್ನು ಸೇರುತ್ತಾಳೆ. ಅವಳು ಬಂದು ತಿಂಗಳುಗಳು ಕಳೆದಿಲ್ಲ. ಅಷ್ಟರಲ್ಲಿ ಸತ್ತ ಗುಂಡ್ಯಾ ಬೆಂಗಳೂರಿನಲ್ಲಿ ಕಾಣಿಸಿಕೊಳ್ಳುತ್ತಾನೆ. ಇಬ್ಬರು ಮುಖಾಮುಖಿಯಾದರೂ ಕಮಲಿ ಅವನನ್ನು ಗುರುತಿಸುತ್ತಾಳೆ; ಆದರೆ ಗುಂಡ್ಯನ ಕಣ್ಣಿಗೆ ಕಮಲಿ ಕಾಣುವುದೇ ಇಲ್ಲ. ವಿಷಯ ಅದಲ್ಲ. ವೀಕ್ಷಕ, ಬೆಂಗಳೂರಿನಲ್ಲಿರುವ ಗುಂಡ್ಯಾ ಊರಿನಲ್ಲಿರುವ ಗುಂಡ್ಯಾನ ತದ್ರೂಪಿ ಎಂದು ತಿಳಿದಿರುತ್ತಾನೆ. ಆದರೆ ಅವನು ಹಳೆಯ ಗುಂಡ್ಯಾನೆ. ಆದರೆ ಕಾರು ಓಡಿಸುವುದು, ಸರಾಗವಾಗಿ ಇಂಗ್ಲಿಷ್ ಮಾತನಾಡುವುದು ಕೆಲವು ವಾರಗಳಲ್ಲಿ ಹೇಗೆ ಸಾಧ್ಯ. ಇದು ಎಂಟನೆ ಅದ್ಭುತ ಅಲ್ಲವೆ?

—ಎನ್. ಎಸ್. ಚಂದ್ರಶೇಖರ್, ಬೆಂಗಳೂರು

**ವಾರದ ಪತ್ರ**

## ಉಚಿತ.. ಉಚಿತ..!

ಒಂದಾನೊಂದು ಕಾಲದಲ್ಲಿ ಜ್ಯೋತಿಷ ತಿಳಿಯಲು ಎಷ್ಟೆಲ್ಲ ಪಾಡು ಪಡಬೇಕಿತ್ತು!. ಜ್ಯೋತಿಷಿಯನ್ನು ಹುಡುಕಿಕೊಂಡು ಹೋಗಿ ಆತ ಕೇಳಿದಷ್ಟು ಸಂಭಾವನೆ ಕೊಟ್ಟು ಗಂಟೆಗಟ್ಟಲೆ ಕಾದು ಭವಿಷ್ಯ ತಿಳಿಯಬೇಕಿತ್ತು. ದಿನ ಭವಿಷ್ಯವಂತೂ ಕೈಗೆ ಎಟುಕುತ್ತಿದ್ದಿಲ್ಲ. ಹಾಗೆಯೇ ವಾಸ್ತು ದೋಷ ಕೂಡ ಅನೇಕ ಮನೆಗಳನ್ನು ಕಾಡಿತ್ತು. ಯಾರು ಯಾರದೋ ಮಾತು ಕೇಳಿ ದೋಷ ಪರಿಹಾರಕ್ಕೆ ಮನೆಯ ಅಡಿಪಾಯವನ್ನೇ ಬದಲಿಸುವ ಅನಿವಾರ್ಯತೆ ಇತ್ತು, ಇಲ್ಲ ಸಾವಿರಾರು ರೂಪಾಯಿ ಖರ್ಚು ಮಾಡಿ ಹವನ ಹೋಮ ಎಂದೆಲ್ಲ ಮಾಡಿಸಬೇಕಿತ್ತು. ಆದರೆ ಈಗ ವಾಹಿನಿಗಳ ಆವಿರ್ಭವದ ನಂತರ ಕುಳಿತಲ್ಲೇ ಪುಗಸಟ್ಟೆ ಭವಿಷ್ಯ, ದಿನ ಭವಿಷ್ಯ ಎಲ್ಲ ತಿಳಿಯಬಹುದಾಗಿದೆ. ಅದನ್ನು ಕೇಳಿಯೇ ದಿನದ ಕಾರ್ಯಕ್ರಮ ರೂಪಿಸಿಕೊಳ್ಳುವಂತಾಗಿದೆ. ಮನೆ ವಾಸ್ತುವಂತೂ ಇನ್ನೂ ಸರಳ. ಈ ಸರಳವಾಸ್ತುವಿನಿಂದ ಸುಖ ಸಂಸಾರ ಪ್ರಾಪ್ತವಾಗುತ್ತಿದೆ. ಇದರಿಂದ ಲಕ್ಷಾಂತರ ವೀಕ್ಷಕರಿಗೆ ಮಹದುಪಕಾರವಾಗಿದೆ!

ವಾಹಿನಿಗಳಲ್ಲಿ ಇನ್ನೊಂದು ವಿನಂತಿ. ಈಗ ಸಣ್ಣಪುಟ್ಟ ಕಾಯಿಲೆಗೂ ಡಾಕ್ಟರ್ ಹತ್ತಿರ ಹೋದರೆ ಸಾವಿರಾರು ರೂ ಕೈಬಿಡುವಷ್ಟು ಆರೋಗ್ಯ ಭಾಗ್ಯ ದುಬಾರಿಯಾಗಿದೆ. ನಮ್ಮ ವಾಹಿನಿಗಳು ದೊಡ್ಡ ಮನಸ್ಸು ಮಾಡಿ ಇಂತಹ ರೋಗಕ್ಕೆ ಇಂತಹ ಔಷಧ ಅಂತ ದಿನಕ್ಕೆ ಒಂದು ಗಂಟೆ ಕಾರ್ಯಕ್ರಮ ಆಯೋಜಿಸಿದರೆ ಅದೊಂದು ಜನ ಮೆಚ್ಚುವ ಕಾರ್ಯಕ್ರಮ ಆಗುವುದರಲ್ಲಿ ಸಂಶಯವಿಲ್ಲ. ಇದರಿಂದ ಸರ್ಕಾರಿ ಆಸ್ಪತ್ರೆಗಳ ಒತ್ತಡವೂ ಕಡಿಮೆಯಾಗಿ ಒಂದು ದಿನ ಸರ್ಕಾರಿ ಶಾಲೆಗಳಂತೆ ಆಸ್ಪತ್ರೆಗಳನ್ನು ಮುಚ್ಚಬಹುದು. ಇಂತಹ ಕಾರ್ಯಕ್ರಮಗಳ ಮೇಲೆ ಸರ್ಕಾರದ ಯಾವ ನಿಯಂತ್ರಣವೂ ಇಲ್ಲದಿರುವುದರಿಂದ ಪ್ರಸಾರ ಮಾಡಲು ಮಾತಿನಂತೆ ಇದಕ್ಕೂ ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ. ಆದಷ್ಟು ಬೇಗ ಇಂತಹ ಕಾರ್ಯಕ್ರಮ ನಿರೀಕ್ಷಿಸಬಹುದೇ?

—ಸತ್ಯಬೋಧ, ಬೆಂಗಳೂರು

## ಧಾರಾವಾಹಿ ಸಂವಾದ ಅನುಕರಣೆ

ಕಲರ್ಸ್, ಝೀ ಮೊದಲಾದ ವಾಹಿನಿಗಳಲ್ಲಿ ಪ್ರಸಾರವಾಗುತ್ತಿರುವ ಧಾರಾವಾಹಿಗಳಲ್ಲಿ ಕೆಲವನ್ನು ನಾವು ಮನೆ ಮಂದಿಯೆಲ್ಲಾ ಜತೆಯಲ್ಲಿ ಕುಳಿತುಕೊಂಡು ವೀಕ್ಷಿಸುತ್ತೇವೆ. ಧಾರಾವಾಹಿಗಳಲ್ಲಿ ಆಗಾಗ ಸಂವಾದ, ಮಾತುಕತೆಯಲ್ಲಿ ಕೇಳಿ ಬರುತ್ತಿರುವ ಆಂಗ್ಲ ಶಬ್ದಗಳು ಬಟ್, ಇನ್‌ಫ್ಯಾಕ್ಟ್, ಆಲ್‌ರೈಟ್ ಹಾಗೂ ಕನ್ನಡದಲ್ಲಿ 'ತಲೆಕೆಡಿಸಿಕೊಳ್ಳು' ವೀಕ್ಷಕರೆಲ್ಲರಿಗೆ ಅರ್ಥವಾಗುವುದಿಲ್ಲ. ಒಂದು ದಿನ ನಮ್ಮೊಡನೆ ಧಾರಾವಾಹಿ ನೋಡಲು ಕುಳಿತುಕೊಂಡಿದ್ದವ ಅಜ್ಜಿ (65) ಈ ಆಂಗ್ಲ ಶಬ್ದಗಳ ಅರ್ಥನ್ನು ಕೇಳಿದರು. ನಾನು ಅರ್ಥ ಹೇಳಿದೆ. ಬಳಿಕ ಇವುಗಳನ್ನು ಪಾತ್ರಧಾರಿಗಳು ಕನ್ನಡದಲ್ಲಿಯೇ ಹೇಳಬಾರದೇಕೆ ಎಂದೂ ಕೇಳಿದರು.

ಆದರೆ ಅಜ್ಜಿ ಈಗ ಮಾತನಾಡುವ ಸಂದರ್ಭದಲ್ಲಿ ಬಟ್, ಇನ್‌ಫ್ಯಾಕ್ಟ್, ಆಲ್‌ರೈಟ್ ಹೇಳುತ್ತಿದ್ದಾರೆ.

—ಸದಾನಂದ ಹೆಗಡೆಕಟ್ಟೆ, ಮೂಡುಬಿದರೆ

## ಡ್ರಾಮಾದಲ್ಲಿ ತಪ್ಪಾಗದಿರಲಿ

ಡ್ರಾಮಾ ಜೂನಿಯರ್ಸ್‌ನಲ್ಲಿ 'ಬಹುರೂಪಿ'ಗಳ ಅತಂತ್ರ ಜೀವನ ಕುರಿತು ಮಾಡಿದ ಡ್ರಾಮಾ ತುಂಬಾ ಚೆನ್ನಾಗಿತ್ತು. ಅದರಲ್ಲಿ ಈಗ ಬಹುರೂಪಿ ಜೀವನ ನಡೆಸುತ್ತಿರುವವರು ಶರಣ ಅಂಬಿಗೇರ ಚೌಡಯ್ಯನವರ ವಂಶದವರು ಎಂದು ಹೇಳಿ ಅಂಬಿಗರ ಚೌಡಯ್ಯನವರ ಭಾವಚಿತ್ರವನ್ನು ತೋರಿಸಲಾಯಿತು. ಆದರೆ ಶರಣ ಅಂಬಿಗರ ಚೌಡಯ್ಯನವರು ನಾವಿಕ ವೃತ್ತಿಯವರು. ಬಹುರೂಪಿ ವೃತ್ತಿಯವರಲ್ಲ. ಇದೇ ಕಾಲದಲ್ಲಿ ಇನ್ನೊಬ್ಬ ಶರಣ ಬಹುರೂಪಿ ಚೌಡಯ್ಯನವರು ಇದ್ದು ದಿನಕ್ಕೊಂದು ವೇಷ ಧರಿಸಿ ನೆರೆದ ಶರಣರಲ್ಲಿ ಒಂದಾಗಿ ಮನರಂಜನೆ ಮೂಲಕ ಆಧ್ಯಾತ್ಮಿಕ ಚರಿತ್ರೆಗಳನ್ನು ನಾಟಕ ರೂಪದಲ್ಲಿ ನೀಡುತ್ತಿದ್ದರು. ಅಂಬಿಗರ ಚೌಡಯ್ಯ ಮತ್ತು ಬಹುರೂಪಿ ಜೀವನ ನಡೆಸುತ್ತಿರುವವರು ಬಹುರೂಪಿ ಚೌಡಯ್ಯನವರ ವಂಶದವರಿರಬಹುದು. ಈ ಸಂಬಂಧ ವೀಕ್ಷಕರಿಗೆ ತಪ್ಪು ಸಂದೇಶ ರವಾನೆಯಾಗಬಾರದೆಂದು ನನ್ನ ಬಿನ್ನಹ.

—ಕೆ.ಸಿ. ರಾಮಗುಂಡಿ, ಬೈಲಹೊಂಗಲ

## ಸೂಪರ್ ಮಕ್ಕಳು

ಝೀ ಟಿ. ವಿ. ಕನ್ನಡದಲ್ಲಿ ಶನಿವಾರ ಮತ್ತು ಭಾನುವಾರ ರಾತ್ರಿ 9 ರಿಂದ ಆರಂಭಗೊಳ್ಳುವ 'ಡ್ರಾಮಾ ಜೂನಿಯರ್' ನಿಜಕ್ಕೂ ಉತ್ತಮ ಕಾರ್ಯಕ್ರಮ. ಉತ್ತಮ ಧ್ಯೇಯ, ಉತ್ತಮವಾದ ಪುಟ್ಟ ಮಕ್ಕಳ ನಟನೆ, ಉತ್ತಮ ಜಡ್ಜ್‌ಗಳು.. ವಾಹ್ ಸೂಪರ್ ಎಂದರೆ ಇದು. 17–7–16ರ ಭಾನುವಾರದ ಎಪಿಸೋಡ್ ಮನ ಕಲಕುವಂತಿತ್ತು. ಎಲ್ಲಾ ಚಾನೆಲ್‌ಗಳ ಮಕ್ಕಳ ಕಾರ್ಯಕ್ರಮದಲ್ಲಿ ಮಕ್ಕಳು ಸೋತರೆ ಮಕ್ಕಳ ಹೆತ್ತವರು ಅಳುವುದು, ಮಕ್ಕಳು ಅಳದಿದ್ದರೆ ನಿರೂಪಕರು, ಜಡ್ಜ್‌ಗಳು ಅಳು ಬರಿಸುವಂತಹ ಮಾತುಗಳನ್ನಾಡಿ ಮಕ್ಕಳನ್ನು ಅಳಿಸಿದರೆ ಇದರಲ್ಲಿ ಮಕ್ಕಳೇ ತಮ್ಮ ಭಾವಪೂರ್ಣ ನಟನೆಯಿಂದ ನಿರೂಪಕರನ್ನು, ಜಡ್ಜ್‌ಗಳನ್ನು, ಪ್ರೇಕ್ಷಕರನ್ನು ಅಷ್ಟೇ ಏಕೆ ಮನೆಯಲ್ಲಿ ಕುಳಿತು ವೀಕ್ಷಿಸುವ ವೀಕ್ಷಕರನ್ನು ಭಾವಪರವಶರನ್ನಾಗಿಸಿ ಕಣ್ಣೀರನ್ನು ತರಿಸಿದ ರೀತಿ ವರ್ಣಿಸಲಸಾಧ್ಯ.

—ಮುಂಡಾಶಿ ಶ್ವೇತಾಸುಧಾ, ಉಡುಪಿ; ಮಂಜುನಾಥ್ ಸಿ. ನೆಟ್ಕಲ್